ಒ ಎಸ್ 149/2019 ಪಿ.ಡಬ್ಲ್ಯೂ 1

ಇಂದು ದಿಃ 29.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಮ್ಮ ತಂದೆ ತಾಯಿಗೆ ನಾವು 4 ಜನ ಮಕ್ಕಳು ಎಂದರೆ ಸರಿ, ನಮ್ಮ ತಂದೆ ಮೃತರಾಗಿ 50 ವರ್ಷ ಆಗಿದೆ. ತಂದೆ ಮೃತರಾದ ನಂತರ ನಾವು 4 ಜನ ಮಕ್ಕಳು ಬಾಯಿ ಮಾತಿನ ಮೂಲಕ ಆಸ್ತಿಗಳನ್ನೆಲ್ಲ ವಿಭಾಗ ಮಾಡಿಕೊಂಡೆವು ಎಂದರೆ ಸರಿಯಲ್ಲ. ಬಾಯಿ ಮಾತಿನ ಮೂಲಕ ವಿಭಾಗ ಅದರೂ ಸಹ ಖಾತೆ ಮಾಡಿಸಿಕೊಂಡಿಲ್ಲ, ಆದರೆ ನಾವು 7 ವರ್ಷಗಳಿಂದ ಬೇರೆ ಬೇರೆಯೇ ವಾಸ ಇದ್ದೇವೆ. ನಮ್ಮ ತಂದೆ ಮೃತಪಟ್ಟ ನಂತರದಿಂದಲೇ ನಾವು ಬೇರೆ ಬೇರೆ ವಾಸ ಇದ್ದರೂ ಕಳೆದ 7 ವರ್ಷಗಳಿಂದ ಬೇರೆ ಬೇರೆ ವಾಸ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೆಲ್ಲರೂ ಬೇರೆ ಬೇರೆ ಆದ ನಂತರ ನನ್ನ ಸಹೊದರನಾದ ಸುಬ್ಬಪ್ಪ 1985-86ರಲ್ಲಿ ಆಸ್ತಿಯನ್ನು ಖರೀದಿಸಿ ಅದನ್ನು ಅವರು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಅನುಸೂಚಿತ ಆಸ್ತಿ 1ಬಿ, 1 ಸಿ, 2 ಎ, 2ಬಿ ಮತ್ತು ಈ ದಾವೆಯ ಐಟಂ 3 ಮತ್ತು 4 ಅನ್ನು ನನ್ನ ಸಹೋದರ ಸುಬ್ಬಪ್ಪ ಸ್ವಂತವಾಗಿ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಹೊರತುಪಡಿಸಿ ಉಳಿದೆಲ್ಲ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು, ಆದರೆ ಈ ಮೇಲೆ ಹೇಳಿದ ಆಸ್ತಿಗಳು ನನ್ನ ಅಣ್ಣನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸುಳ್ಳು. ಪಿತ್ರಾರ್ಜಿತ ಆಸ್ತಿಯನ್ನು ಈ ಮೊದಲೇ ನಾವು ಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಇದ್ದೇವೆ ಎಂದರೆ ಸರಿಯಲ್ಲ.

ಸುಬ್ಬಪ್ಪನಿಗೆ ಸೇರಿದ ಆಸ್ತಿಯನ್ನು ಅವರ ಮಕ್ಕಳು ಬೇರೆ ಬೇರೆ ಮಾಡಿಕೊಂಡು ಅವರೂ ಸಹ ಬೇರೆ ಬೇರೆ ವಾಸ ಇದ್ದಾರೆ ಎಂದರೆ ಸರಿ. ಶಿವಲಿಂಗಮ್ಮ ನನ್ನ ಹೆಂಡತಿ. ನಾಗರಾಜು ಮತ್ತು ನಾನು ಇಬ್ಬರೂ ಸೇರಿ ಸರ್ವೆ ನಂ. 87/2 ರಲ್ಲಿ 1 ಎಕರೆ 20 ಗುಂಟೆ ಸರ್ವೆ ನಂ. 18/1 ರಲ್ಲಿ 23 ಗುಂಟೆ ಜಮೀನನ್ನು ನನ್ನ ಹೆಂಡತಿ ಹೆಸರಿಗೆ ದಾನ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ನನ್ನ ಹೆಸರಿಗೆ ಬರುವ ಅರ್ಧ ಆಸ್ತಿಯನ್ನು ವಾದಿಗಳಿಗೆ ಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಸರ್ವೆ ನಂ. 121/4ಬಿ ರಲ್ಲಿ 14 ಗುಂಟೆ ಜಮೀನು ನನ್ನ ತಾತನ ಹೆಸರಿನಲ್ಲಿದೆ ಎಂದರೆ ಸರಿ. ಆ ಆಸ್ತಿಯನ್ನು ನಾನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸುಳ್ಳು. ನನ್ನ ತಾಯಿ ಹೆಸರಿನಲ್ಲಿ ಸರ್ವೆ ನಂ. 120/3ರಲ್ಲಿ 13 ಗುಂಟೆ ಜಮೀನು ಇದ್ದು ಅದನ್ನು ಸಹ ಸೇರಿಸಿಲ್ಲ ಎಂದರೆ ಸುಳ್ಳು. ನನ್ನ ಅಣ್ಣನ ಆಸ್ತಿಯನ್ನು ಹೇಗಾದರೂ ಮಾಡಿ ಲಪಟಾಯಿಸಬೇಕೆಂದು ಸುಳ್ಳು ದಾಖಲಾತಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.